(84) 2

Regd No B G 155 Sri 5—5—1965

ಸತ್ಯವಾದಿ

48 th Year
Satyavadi
DAILY
MYSORE 4

ಸಂಸ್ಥಾಪಕರು — ಆವಮನೆವಂಶ್ಯೋದ್ಧಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಂನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಭೀಕರ ಕೃತ್ಯ

ರಾಯುವುದಾದ ಹೃದಯ ಭೇದಕ ವಾರ್ತೆ ಇದು— ಪೈಲ್ವಾ ಬಿಹಾರಿ ಲಾಲನ ಕೈಯನ್ನೇ ಕತ್ತರಿಸಿಹಾಕಿರುವರು : ಅಸ್ವತ್ರೆಯಲ್ಲಿದ್ದಾನೆ ; ತಾನು ನಿದ್ರಿಸುತ್ತಿದ್ದಾಗ ಕೆಲವರು ಮೇಲೆ ಬಿದ್ದು ಕಲ್ಲುಗಳಿಂದ ಹೊಡೆದರೆಂದೂ, ಅವನನ್ನು ಅಟ್ಟಿಕೊಂಡು ಹೋದಾಗ ಅವರು ತನ್ನ ಕೈಗಳನ್ನು ಕತ್ತರಿಸಿಹಾಕಿದರೆಂದೂ ಅವನು ಪೋಲೀಸರಿಗೆ ತಿಳಿಸಿರುವರು.

ಭಾರತವು ಆತ್ಮಹತ್ಯೆ ಮಾಡಿಕೊಳ್ಳುತ್ತಿದೆಯೇ ?

ಆಂಗ್ಲೇಯ ಭಾಷೆಯನ್ನು ಅಧಿಕಾರ ಅಟ್ಟದಿಂದ ಕೆಳಗಿಳಿಸುವದೆಂದರೆ ಆತ್ಮಹತ್ಯೆ ಮಾಡಿಕೊಂಡಂತೆಂದಿದ್ದಾರೆ ಭಾರತದ ವಿದ್ಯಾ ಮಂತ್ರಿ ಶ್ರೀ ಭಾಗವತ್ಜಾರವರು ; ಅದನ್ನು ಸಮರ್ಥಿಸಿಕ್ಕಾಗಿ ಅವರು ಕೆಲ ಕಾರಣಗಳನ್ನು ಕೊಟ್ಟಿದ್ದಾರೆ—

(೧) ' ವಿಜ್ಞಾನ ಹಾಗೂ ಯಂತ್ರಶಾಸ್ತ್ರ ಅಥವಾ ಇತರ ಶಾಸ್ತ್ರಗಳಿಗೆ ಒಂದು ತನ್ನದೇ ಆದ ಭಾಷೆ ಎಂದಿತೆಯೇ ? ಪ್ರಯೋಗ ನಡೆಸುವಾಗ ಇಂಗ್ಲೀಷಿನಿಂದಲೇ ಹೆಸರು ವಗೈರೆ ಹೇಳಿದ್ದಲ್ಲಿ ಫಲಿತಾಂಶ ಸರಿಯಾಗಿ ಬರಲಿಕ್ಕಿಲ್ಲವೇ ? ರಷ್ಯಾ ಜರ್ಮನಿ ಜಪಾನು ಮುಂತಾದ ದೇಶಗಳು ವಿಜ್ಞಾನ ಹಾಗೂ ಯಂತ್ರಶಾಸ್ತ್ರ ರಂಗದಲ್ಲಾಡಲು ಇಂಗ್ಲೀಷು ಕೋಡಂಗಿಯನ್ನು ಬಿಟ್ಟಿದ್ದಾರೆಯೇ ? ಆಂಗ್ಲೇಯ ಭಾಷೆ ಉಂಟಾಗುವುದಕ್ಕೆ ಮುಂಚೆ ಭಾರತೀಯರಿಗೆ ವಿಜ್ಞಾನ ಹಾಗೂ ಯಂತ್ರಜ್ಞಾನದ ಗಂಧಗಾಳಿಯೂ ಸೋಂಕಿರಲಿಲ್ಲವೇ ? ಆಂಗ್ಲೇಯರ ಅಡಿಗೆಗುವುದರಿಂದಲೇ ಭಾರತೀಯರು ಧನ್ಯವಾಗುವರೇನು ? ಒಂದು ಸ್ವತಂತ್ರ ಹಾಗೂ ಸಾರ್ವಭೌಮ ಮಹಾರಾಷ್ಟ್ರದ ಶಿಕ್ಷಣ ಮಂತ್ರಿ ಈ ಅನ್ಯ ದೇಶದ ಭಾಷೆಯು ಕಿರಿತು ವಕಾಲತು ವಹಿಸಬಹುದೇ ? ಈ ರೀತಿ ಬೇರೆ ಯಾವ ರಾಷ್ಟ್ರದ ಶಿಕ್ಷಣ ಮಂತ್ರಿಯಾದರೂ ಮಾತಾಡುವರೇ ?

(೨) ' ಇಂಗ್ಲೀಷು ಭಾಷೆಯಿಂದಲೇ ನಾವು ಸ್ವತಂತ್ರ ಸಮುದಲ್ಲಿ ಹೋರಾಡಿದ್ದೆವು '— ಭಾರತೀಯರಾಡುವ ಇಂಗ್ಲೀಷನ್ನು ಕೇಳಿ ಆಂಗ್ಲೇಯರು ಓಡಿಹೋದರೇನು ? ಇಂಗ್ಲೀಷನ್ನು ಇಳಿಸಿಬಿಟ್ಟು ಹಿಂದಿಯನ್ನು ' ಹೇರುವುದರಿಂದ ' ಜಣಿಯರು ಆಕ್ರಮಣ ನಡೆಸುತ್ತಿದ್ದಾರೇನು ? ಪಾಕಿಸ್ತಾನಿಗಳು ಹುಂಡೆ ಒಲು ಅದೇ ಕಾರಣವೇನು ? ಭಾರತೀಯರು ಇಂಗ್ಲೀಷು ಕಲಿಯದೇ ಇರುವುದಲ್ಲಿ ಸ್ವಾತಂತ್ರ್ಯ ಕಾರಣವಾಗಿಯೇ ಇರುತ್ತಿತ್ತೇನು ? ಇಂಗ್ಲೀಷನ್ನು ಬಿಟ್ಟಲ್ಲಿ ಭಾರತದ ಸ್ವಾತಂತ್ರ್ಯ ಹೋಗಿಬಿಡುತ್ತದೇನು ? ಲೋಕಮಾನ್ಯ ತಿಲಕ್, ಮಹಾತ್ಮಾ ಗಾಂಧೀಜೀ, ಸುಭಾಸು ಬಾಬು ಮುಂತಾದವರು, ಅಲ್ಲದೆ ಪಂಪುಪೂಜ ನೀಯು ಕೇಶವ ಬಲಿರಾಂ ಹೆಗ್ಡೇವಾರ್ ಮುಂತಾದವರು ಜನಜಾಗರಣೆ ನಡೆಸಿದ್ದು, ರಾಷ್ಟ್ರೀಯತಾ ಆಮೃತ ಕುಂಡಸೆ ನಡೆಸಿದ್ದು ಆಂಗ್ಲೇಯ ಭಾಷೆಯ ಸಹಾಯದಿಂದೇನು ?— ಅಥವಾ ಈ ನಾಡಿನ ದುಃಖಕ್ಕೆ ಬಲಿ ಇದೇ ಭೂಮಿಯ ಭಾಷೆಯನ್ನೇ ಮಾತಾಡಿ ಏನು ? ಶ್ರೀ ಭಾಗವತ್ಜಾರವರು ಇತಿಹಾಸಜ್ಞರೂ ಇರುವುದಿಲ್ಲ, ಸ್ವಾತಂತ್ರ್ಯ ಸಮುದಲ್ಲಿ ಭಾಗವಹಿಸಿದವರೂ ಇರುವುದಿಲ್ಲ.

(ಹಿಂದಿನ ಪುಟದಲ್ಲಿ ಮುಂದುವರಿದಿದೆ)

8 ಮಂದಿ ಪಾಕಿಸ್ತಾನಿ ಸಿಪಾಯಿ ಕೊಲೆಗಡುಕರು

ಜಮ್ಮು— ನಿನ್ನೆ ವಾರ್ತೆಯಂತೆ ಜಂಬ್ ಮತ್ತು ಪೂಂಚ್ ಭಾಗದಲ್ಲಿ 4 ದಿನಗಳಿಂದ ಭಾರತ ಉಸ್ತುವಾರಿ ಸೇನೆಯೊಡನೆ ನಡೆಸಿದ ಘರ್ಷಣೆಯಲ್ಲಿ 8 ಮಂದಿ ಪಾಕಿಸ್ತಾನಿ ಸಿಪಾಯಿಗಳು ಕೊಲ್ಲಲ್ಪಟ್ಟರು : ಶಸ್ತ್ರಾಸ್ತ್ರಗಳೂ ಮದ್ದುಗುಂಡುಗಳೂ ವಶಪಡಿಸಿಕೊಳ್ಳಲಾಗಿದೆ.

★

ವಿಶ್ವಸಂಸ್ಥೆಗೆ ಜಯ

ವಿಶ್ವಸಂಸ್ಥೆ— ಕಚ್‌ಗೆ ಪಾಕಿಸ್ತಾನದ ಹಕ್ಕನ್ನು ನಿರಾಕರಿಸಿ ವಿಶ್ವಸಂಸ್ಥೆಗೆ ಭಾರತ ಬರೆದಿದೆ.

★

ಪಾಕಿಸ್ತಾನದ ಸೈನ್ಯ ಶೇಖರಣೆ

ಸವದೆಹಲಿ— ಪಶ್ಚಿಮ ಬಂಗಾಳ ಗಡಿಯಲ್ಲಿ ಪಾಕಿಸ್ತಾನದ ಶಸ್ತ್ರಾಸ್ತ್ರ ಪಡೆಗಳು ಹೇರಳವಾಗಿ ಶೇಖರಿಸಲಾಗುತ್ತಿದೆಯೆಂದೂ, ಶತ್ರುಗಳನ್ನು ಬಲಪಡಿಸಿ, ಕಂದುಕ ತೋಡುತ್ತಿರುವುದೆಂದೂ ಪ್ರಕಟವಾಗಿದೆ : ಈ ಸಂದರ್ಭದಲ್ಲಿ ಜೀವಾದ ನೆರವು ದೊರೆಯುತ್ತಿರಬಹುದೆಂದೂ ಹೇಳಲಾಗುತ್ತಿದೆ.

★

ಪಾಕಿಸ್ತಾನದಲ್ಲಿ ಬಜೆಟ್

ಕರಾಚಿ (ಪಶ್ಚಿಮ ಬಂಗಾಳ)— ಪೂರ್ವ ಪಾಕಿಸ್ತಾನದ ಕಾರ್ಯಾಲಯ ವಿಕ್ಷಿಪ್ತ ಗಡಿ ಪಟ್ಟಣಗಳಲ್ಲಿ ಕನಿಷ್ಠಾಂದಿಂದ ಬಜೆಟ್ ತೂಡಲಾಗುತ್ತಿದೆ ಎಂದು ವರದಿಯಾಗಿದೆ.

★

ಬೆಂಗಳೂರು — ತಾ|| 4 ರಲ್ಲಿ ವಾತಾವರಣ್ಯ ಭೇದಿ ರೋಗಗ್ರಸ್ತರು 12 ಮಂದಿ ಪ್ರಾಣ ಒಂದು ಪ್ರಾಣವು.

★

ನಾಳೆಯ ಪಂಚಾಂಗ

ದೈವಜ್ಞ ವಿಜಾಪುರ

ಅಶ್ವಿನ ಮಾಸ ಶುಕ್ಲ ಪಕ್ಷ ಧರ್ಮಾಧಿಕಾರಿ ಕಾರ್ಯಕಾರ್ಯಾಲಯ ಜ್ಯೋತಿರ್ವಿದ್ಯಾಸ್ಥಾಪಕ ಸಂವತ್ಸರ ಕೃಷ್ಣ ಜ್ಯೋತಿಷಾವರಿಂದ

6 ಗುರುವಾರ ಪಂಚಮಿ-ಷಷ್ಠಿ ಪುನರ್ವಸು ಶ್ರೀ ಶಂಕರ ಜಯಂತಿ

(೩) 'ಸ್ವಾತಂತ್ರ್ಯ ಪಡೆದ ಆಫ್ರಿಕದ ದೇಶಗಳು ಇಂಗ್ಲೀಷನ್ನೇ ಅಧಿಕೃತ ಭಾಷೆಯನ್ನಾಗಿ ಉಪಯೋಗಿಸುತ್ತಿವೆ' : ಆಫ್ರಿಕಾ ದೇಶಗಳಿಗೂ ಭಾರತಕ್ಕೂ ಅಜಗಜಾಂತರ ವ್ಯತ್ಯಾಸ ಇರುವುದಲ್ಲವೇ ? ಆಲ್ಲದೆ ಫ್ರಾನ್ಸಾ ಮುಂತಾದ ದೇಶಗಳು ತಮ್ಮ ದೇಶೀಯ ಭಾಷೆಯಲ್ಲೇ ವ್ಯವಹಾರ ನಡೆಸುತ್ತಿಲ್ಲವೇನು ? ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ರಷ್ಯಾದಲ್ಲಿ ರಾಯಭಾರಿಯೆಂದು ಅಧಿಕಾರ ಪತ್ರವನ್ನು ಆಂಗ್ಲೇಯ ಭಾಷೆಯಲ್ಲಿ ಅರ್ಪಿಸಿದಾಗ ಅವರೇಕೆ ಅದನ್ನು ತಿರಸ್ಕರಿಸಿದರು ? ಶ್ರೀ ಭಾಗವತರಿಗೆ ಅಂತಹ ಸಂಕಷ್ಟ ಬಂದಿರುವುದಿಲ್ಲ, ಅಲ್ಲದೆ ಅವನಿಗೆ ಭಾಷಾತತ್ವ ಮಹಾತ್ಮೆಯ ಅರಿವೂ ಇರುವುದಿಲ್ಲ.

ಈ ಎಲ್ಲಾ ಕಾರಣಗಳಿಂದಾಗಿ ಭಾರತದಲ್ಲಿ ಇಂಗ್ಲೀಷು ಇನ್ನೂ ಅಧಿಕಾರ ಅಟ್ಟದಲ್ಲಿಯೇ ಬೀಡುಬಿಟ್ಟಿದೆ. ನಾನು ಅಧಿಕಾರದಲ್ಲಿರುವವರೆಗೆ ಅದಕ್ಕೇ ಹೋರಾಡುವೆನೆಂದೂ ಶ್ರೀ ಭಾಗವತ ಹೇಳುತ್ತಿದ್ದಾರೆ : ಈ ಅಧಿಕಾರ ಅಂತಸ್ತು ಅದೇನು ಆರ್ಷವ ಅನ್ನುವುದೋ ? ಸ | ಶ್ರೀ | ಕೆ ಡಿವಾಲವೀಹು, ಕೃಷ್ಣ ಮೆನನ್, ಬಿಜು ಪಟ್ನಾಯಕ್, ಶಂಕರ್, ಕೈರಾನ್, ಷೇಕ್ ಅಬ್ದುಲ್ಲಾ..... ಅವಸ್ಥೆ ಏನಾಗಿರುತ್ತದೆ ?

ಇಷ್ಟೆಲ್ಲಾ ಕಾರಣಗಳಿದ್ದೂ, ಸ್ವತಃ ಅವರೇ ಬಿಡದಿದ್ದೂ, ಕೊನೆಯಪಕ್ಷ ಹಿಂದಿಯೇ ಸಂಸ್ಕಾರ ಭಾಷೆ ಯೂಗುವುದಲ್ಲಿ ಸಂದೇಹವೇ ಇಲ್ಲವೆಂದು ಅವರು ಹೇಳಿಕಾರರೆ ! ಆದರೆ ಆಂಗ್ಲೇಯ ಭಾಷೆಯನ್ನು ಅಧಿಕಾರ ಅಟ್ಟದಿಂದ ತಳಗಿಳಿಸುವುದೆಂದರೆ ಆತ್ಮಹತ್ಯೆಯಂತೆಯೆಂದೂ ಅವರು ಹೇಳುತ್ತಾರೆ ! ಅಂದರೆ ಭಾರತಕ್ಕೆ ಆತ್ಮಹತ್ಯೆಯು ಪೂರಿಯಲ್ಲಿ ಸಾಗುತ್ತಿದೆಯೇ ?— ಪ್ರಶ್ನೆ ಸ್ವಾಭಾವಿಕವಾಗಿ ಬರುತ್ತದೆ : ಈ ರೀತಿಯ ಆತ್ಮಹತ್ಯೆಯಿಂದ ಭಾರತವನ್ನು ಳಿಸಲಿಕ್ಕಾಗಿಯೇ ಇವರು ಪದವಿ ಪೀಠದಲ್ಲಿ ಪಟ್ಟಾಗಿ ಕುಳಿತು ಕೊಂಡಿದ್ದಾರೇನು ? ಇಂತಹ ಸಚಿವ ಸಾಮ್ರಾಟರುಗಳವರೆಗೂ ಭಾರತದಲ್ಲಿ ಭಾರತೀಯ ಭಾಷೆ ವ್ಯವಹಾರಿಕ ಭಾಷೆಯಾಗಿ ಬಳಕೆಗೆ ಬಾರದೆನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. — ಶಿವಶಂಕರ

ವಿವಾಹ ಮಹೋತ್ಸವ

ಸೌ || ಅನಂತಲಕ್ಷ್ಮಿ ಬಿ ಎ (ಡಿ ಸೆಬ್ಬಯ್ಯಾ ರೋಡ್ ' ಶಾರದಾ ' ಎಂಬ ಗೃಹದಲ್ಲಿರುವ ಶ್ರೀ ಶೆ. ವೆಂಕಟನಾರಸಿಂಹನವರ ಪುತ್ರಿ) ಮತ್ತು ಚಿ || ಟಿ. ಎಸ್. ಗುಂಡೂರಾವ್ ಬಿ ಇ. (ತುಮಕೂರಿನಲ್ಲಿರುವ ಶ್ರೀ ಬಿ ಲಕ್ಷ್ಮೀ ನಾರಾಯಣ ಶಾಸ್ತ್ರಿಗಳವರ ಪುತ್ರ) ಇವರ ವಿವಾಹ ಮಹೋತ್ಸವವು ಸೋಮವಾರ ವೈಭವವಾಗಿ ನೆರವೇರಿತು.

ಸಮಯೋಚಿತ ಸೂಕ್ತಿಗಳು

ಶಿಷ್ಯಂ ಹೆಣವನ್ನು ಅಪಹರಿಸುವ ಗುರುಗಳು ಲೋಕದಲ್ಲಿ ಕುಂಬ ಇದ್ದಾರೆ : ಆದರೆ ಶಿಷ್ಯಂ ಮನವನ್ನು ಅಪಹರಿಸುವ ಗುರು ದುರ್ಲಭ.

—0—

ನಾಳೆ ಶ್ರೀ ಶಂಕರ ಜಯಂತಿ ಪ್ರಯುಕ್ತ ಕರ್ಮವೀರ ಕಾರ್ಯಾಲಯಕ್ಕೆ ರಜವಿದೆ.



ಗೋಸ್ಪರ್ಧಾತ್ಮಕ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ ಜನಪ್ರಿಯ 12 ನೇ ವಾರ

.... ಮನಮೋಹನ ಈಸ್ಟ್‌ಮನ್ ಕಲರ್ ಚಿತ್ರ ....

ಬಾಘಿ (ಹಿಂದಿ) BAGHI

ತಾರಾಗಣ— ಪ್ರದೀಪಕುಮಾರ್, ಲೀಲಾನಾಯ್ಡು, ಹೆಲೆನ್, ಟೀನಾ, ಸುಲೋಚನಾ

ಪ್ರತಿದಿನ 3 ಪ್ರದರ್ಶನಗಳು

ಆಪೆರಾ— 30—4—65 ರಿಂದ

ಅಮೋಘ ಕನ್ನಡ ಚಿತ್ರ — ದಿನ 3 ಆಟಗಳು

ನವ ಜ್ಯೋತಿ [ಕನ್ನಡ]

ತಾರಾ— ರಾಜಕುಮಾರ್, ಉದಯಕುಮಾರ್, ಹರಣಿ, ವೈಜಯಂತಿ, ಬಾಲಕೃಷ್ಣ

SHAKTI

SUDHA

A Superb Tonic

Help The Gorakshana

"ಗೋರಕ್ಷಣಾ" ಕ್ಕೆ ಜೊಂಬಲಿಗಳಾಗಿರಿ

ಶ್ರೀ ಬ್ಯಾರಿಕಾ ಜಗದ್ಗುರು ಮಹಾಸಂಸ್ಥಾನಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಗಳವರ ಆಶಾರ್ವಾದಪೂರ್ವಕ ಸ್ಥಾಪಿಸಲ್ಪಟ್ಟಿದೆ

ಕರ್ನಾಟಕದಲ್ಲಿ ಗೋರಕ್ಷಣೆ, ದನಾಭಿವೃದ್ಧಿ, ಕೃಷಿಯಭಿವೃದ್ಧಿ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಪತ್ರಿಕೆಗಳಲ್ಲಿ.

ವಾರ್ಷಿಕ ಚಂದಾ ೫೦ ನೈಪೈ ; ಗೋರಕ್ಷಣಾ ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ಚಂದಾದಾರರೂ ಕಾರ್ಯಕರ್ತರಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣಾ ಆಫೀಸು ಚಾಮರಾಜಪುರಂ, ಮೈಸೂರು ೪

Edited, Printed & Published by the Proprietor
Dharma Prachara Nirata M S Krishna Rao
at the Jayavedi Press Camarajapuram Mysore 4